ಸೃಜನಿ

**SRUJANI: Indian Journal of Innovative Research and Development (SIJIRD)**
Volume-2 Issue 6, January-February 2024, Pp. 101-103
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ತುಮಕೂರು ನಗರದ ಅಪ್ರಕಟಿತ ಬಂದೂಕು ವೀರ ಮಾಸ್ತಿಗಲ್ಲುಗಳು ಮತ್ತು ಆತ್ಮ ಬಲಿದಾನ ಶಿಲ್ಪಗಳು

**ಶ್ರೀನಿವಾಸ[1] ಮತ್ತು ಅಮರೇಶ ಜಿ[2]**
[1]ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು
[2]ಅತಿಥಿ ಉಪನ್ಯಾಕರು, ವಿದ್ಯಾವಾಹಿನಿ ಪದವಿ ಪೂರ್ವ ಕಾಲೇಜು, ಕ್ಯಾತಸಂದ್ರ, ತುಮಕೂರು

**Abstract:**
*ತುಮಕೂರು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಮಹತ್ವವನ್ನು ಪಡೆದ ನೆಲೆ. ಭೌಗೋಳಿಕವಾಗಿ ಅನೇಕ ಬೆಟ್ಟಗುಡ್ಡಗಳ ಸಾಲುಗಳನ್ನು ಒಳಗೊಂಡಿದ್ದು, ಪ್ರಾಕೃತಿಕ ಸಂಪತ್ತು ಹೇರಳವಾಗಿದೆ. ಈ ಪ್ರದೇಶವನ್ನು ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ವಿಜಯನಗರ ಸಾಮ್ರಾಜ್ಯ ಹಾಗೂ ಅನೇಕ ಸ್ಥಳೀಯ ಪಾಳೆಗಾರರ ಮನೆತನಗಳು[1] ಆಳ್ವಿಕೆಯನ್ನು ನಡೆಸಿ ಅನೇಕ ಕುರುವುಗಳನ್ನು ಬಿಟ್ಟು ಹೋಗಿದ್ದಾರೆ. ಪ್ರಸ್ತುತ ತುಮಕೂರಿನಲ್ಲಿ ಇತಿಹಾಸದ ಆಕರಗಳಾದ ಸ್ಮಾರಕ ಶಿಲ್ಪಗಳನ್ನು ಹೊಸದಾಗಿ ಶೋಧನೆ ಮಾಡಲಾಗಿದೆ. ತುಮಕೂರು ನಗರ ಪರಿಸರ ವ್ಯಾಪ್ತಿಯಲ್ಲಿ ಎರಡು ಆತ್ಮ ಬಲಿದಾನ ಶಿಲ್ಪಗಳು ಮೂರು ಬಂದೂಕು ವೀರ ಮಾಸ್ತಿಗಲ್ಲುಗಳನ್ನು ನಾವು ಕಾಣಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಇವುಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ತುಮಕೂರು, ಬಂದೂಕು ವೀರಗಲ್ಲುಗಳು, ಮಹಾಸತಿ.*

## ಪೀಠಿಕೆ

ಕರ್ನಾಟಕದಾದ್ಯಂತ ಮಾತ್ರವಲ್ಲದೇ ದೇಶದ ಇತರೆ ಪ್ರದೇಶಗಳಲ್ಲಿಯೂ ಕೂಡ ಐತಿಹಾಸಿಕ ವಿಷಯಗಳಿಗೆ ಸಂಬಂಧಿಸಿದಂತಹ ವೀರಗಲ್ಲುಗಳು ಕಂಡು ಬರುತ್ತವೆ. ಪ್ರಾಚೀನ ಮೌಲ್ಯವೊಂದರ ಸಂಕೇತವಾಗಿರುವ ವೀರಗಲ್ಲುಗಳು ಕೇವಲ ಆತ್ಮಾರ್ಪಣೆಯ ಪ್ರತೀಕಗಳಾಗಿರದೇ ಸಮಕಾಲೀನ ಬದುಕಿನ ಸಾಮಾಜಿಕ ಜವಾಬ್ದಾರಿಯ ಸಂಕೇತಗಳಾಗಿಯೂ ಗೋಚರವಾಗುತ್ತವೆ. ವೀರರು ತಮ್ಮ ಸ್ವಾರ್ಥಕ್ಕಾಗಿ ಮಡಿಯದೆ, ಸಮಾಜದ ಒಳಿತಿಗಾಗಿ ಪ್ರಾಣ ತ್ಯಾಗ ಮಾಡಿದ ನೆನಪಿಗೋಸ್ಕರ ಹಾಕಿಸಿರುವ ಸ್ಮಾರಕ ಶಿಲ್ಪಗಳೇ ವೀರಗಲ್ಲುಗಳು (ಚಿದಾನಂದ ಮೂರ್ತಿ, ಎಂ) ಅನೇಕ ಇತಿಹಾಸಕಾರರು ಬೇರೆ ಬೇರೆ ಆಯಾಮಗಳ ಮೂಲಕ ವೀರಗಲ್ಲುಗಳ ಕುರಿತ ಬೇರೆ ಮಜಲುಗಳ ಸಂಗತಿಗಳನ್ನು ವಿವರಿಸಿದ್ದಾರೆ. ಪ್ರಾಸಂಗಿಕವಾಗಿ ವೀರಗಲ್ಲುಗಳ ಶಿಲ್ಪಗಳ ವಿವರ ಕುರಿತು ಈ ಲೇಖನದಲ್ಲಿ ವಿವೇಚಿಸಿದ್ದಾರೆ. ಶಿಲ್ಪ ವಿವರಣೆ, ಬಂದೂಕುಧಾರಿ ವೀರಗಲ್ಲುಗಳು, ಬಂದೂಕನ್ನು ಪ್ರಯೋಗಿಸುವ ವೀರ, ಬಂದೂಕು ಸಹಿತ ವೀರಗಲ್ಲುಗಳು, ಬಂದೂಕು ವೀರಮಾಸ್ತಿಗಲ್ಲುಗಳು ಕುರಿತು ವಿವರಿಸಲಾಗಿದೆ.

## ಬಂದೂಕು ವೀರ ಮಾಸ್ತಿಗಲ್ಲುಗಳು

ಭಾರತದ ಇತಿಹಾಸವು ಅನೇಕ ಚಾರಿತ್ರಿಕ ಅಂಶಗಳನ್ನು ತನ್ನ ಒಡಲೊಳಗೆ ಇಟ್ಟುಕೊಂಡಿದೆ ಅದನ್ನು ಸಂಶೋಧಕರು ಹೊರತೆಗೆಯುವ ಪ್ರಯತ್ನವನ್ನು ಈಗಲೂ ಮಾಡುತ್ತಿದ್ದಾರೆ. ಪ್ರಾಚೀನ ಕಾಲದಲ್ಲಿ ಸಿಡಿಮದ್ದುನ್ನು ಬಳಸುವ ಕಲೆಯನ್ನು ತಿಳಿದ್ದಿದ್ದರು ಎಂಬುದನ್ನು ಮಹಾಭಾರತ, ಮುದ್ರಾ

**Please cite this article as:** ಶ್ರೀನಿವಾಸ ಮತ್ತು  ಅಮರೇಶ ಜಿ. (2024). ತುಮಕೂರು ನಗರದ ಅಪ್ರಕಟಿತ ಬಂದೂಕು ವೀರ ಮಾಸ್ತಿಗಲ್ಲುಗಳು ಮತ್ತು ಆತ್ಮ ಬಲಿದಾನ ಶಿಲ್ಪಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 101–103.

ರಾಕ್ಷಸ, ಅಗ್ನಿ ಪುರಾಣಗಳಲ್ಲಿ ಉಲ್ಲೇಖವಾಗಿರುವುದನ್ನು ಒಪೆಟ್, ವಿಲ್ಸನ್, ರಾಮದಾಸ್ ಸೇನ್, ಆರ್.ದೀಕ್ಷಿತ್ ಮುಂತಾದ ಸಂಶೋಧಕರು ಗುರುತಿಸಿದ್ದಾರೆ. ಶತ್ರುಘ್ನ, ಕನಪ, ನರಚ, ಕಾಲಚಕ್ರ, ದೀಧಿತಿ, ಕದಿಣಿ ಈ ಮೇಲಿನ ಎಲ್ಲಾ ಪದಗಳು ಸಿಡಿಮದ್ದಿನ ಸ್ವರೂಪದ ಆಯುಧಗಳ ಹೆಸರುಗಳಾಗಿವೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅಗ್ನಿ ಬಾಣ, ಶುಕ್ರ ನೀತಿ ಸಾರದಲ್ಲಿ ಬರುವ ನಾಲಿಕ ಇವುಗಳು ಸಿಡಿಮದ್ದಿನ ಆಯುಧಗಳಾಗಿವೆ[2].

ಎಂ.ಚಿದಾನಂದಮೂರ್ತಿ ಅವರ ಪ್ರಕಾರ ಪ್ರಾಚೀನ ಕರ್ನಾಟಕದಲ್ಲಿ ಸಿಡಿಮದ್ದಿನ ಬಳಕೆ ಇರಲಿಲ್ಲ. ವಿಷಪೂರಿತ ಆಯುದಗಳು ಸಾಮಾನ್ಯವಾಗಿ ಬಳಕೆಯಲ್ಲಿದ್ದವು.ವಿಜಯನಗರ ಕಾಲದಲ್ಲಿ ಬಂದೂಕು ವೀರಗಲ್ಲುಗಳ ಸಂಖ್ಯೆ ತೀವ್ರವಾಗಿ ಹೆಚ್ಚಿದ್ದವು. ಬಂದೂಕು ವೀರಗಲ್ಲು ಕುರಿತಂತೆ ಪ್ರಾಥಮಿಕ ಆಕರವನ್ನು ಎಫಗ್ರಫಿಯಾ ಕರ್ನಾಟಿಕ ಸಂಪುಟ 8 ರಲ್ಲಿ 483ನೇಯ ಶಾಸನದಲ್ಲಿ ಮೊಟ್ಟ ಮೊದಲಿಗೆ ಕೋವಿಕಾರ ದೇವಯ್ಯ ನಾಯಕ ಸರ್ಪ ದಷ್ಟವಾದಲ್ಲಿ ಆತನ ಸತಿ ಮಹಾಸತಿಯಾದ ಉಲ್ಲೇಖ ತಿಳಿಸುತ್ತದೆ.

ವಿಜಯನಗರ ಕಾಲದಲ್ಲಿ ವಿಶೇಷವಾಗಿ ಬಂದೂಕು ಬಳಕೆಯಲ್ಲಿತ್ತು ಎಂಬುದನ್ನು ವಿದೇಶಿ ವಿದ್ವಾಂಸರಾದ ನ್ಯೂನೀಜ್, ಡಮೀಂಗೊ ಪಾಯಸ್, ನೀಕೋಲೊ ಕೌಂಟಿ ಮುಂತಾದವರು ನಿಖರವಾದ ಮಾಹಿತಿ ನೀಡಿದ್ದಾರೆ. ಗೀತಾ ಪಾಟೀಲ್‌ರವರು ಕರ್ನಾಟಕದ ಬಂದೂಕು ವೀರಗಲ್ಲುಗಳು ಎಂಬ ಮಹಾಪ್ರಬಂಧದಲ್ಲಿ ಅನೇಕ ಮಾಹಿತಿ ನೀಡಿದ್ದಾರೆ. ಇಂತಹ ಬಂದೂಕು ವೀರಮಾಸ್ತಿ ಕಲ್ಲುಗಳನ್ನು ತುಮಕೂರು ನಗರದಲ್ಲಿ ಹೊಸದಾಗಿ ಸಂಶೋಧಿಸಲಾಗಿದೆ.[3] ಅವುಗಳ ವಿವರಣೆ ಈ ಕೆಳಗಿನಂತಿವೆ.

**ಒಂದನೇ ಬಂದೂಕು ವೀರಮಾಸ್ತಿಗಲ್ಲು**

ಸ್ಥಳ: ತುಮಕೂರಿನ ಮಹಾನಗರ ಪಾಲಿಕೆ ಮುಂಭಾಗ

ಕಾಲ: 15–16ನೇ ಶತಮಾನ

ಭೌತಿಕ ಸ್ಥಿತಿಗತಿ: ಕೆಂಪು ಮತ್ತು ಬಿಳಿ ಕಪ್ಪು ಮಿಶ್ರಿತ ಒರಟು ಶಿಲೆ, 3ಅಡಿ ಎತ್ತರ, 2ಅಡಿ ಅಗಲ, 1/2 ಅಡಿ ದಪ್ಪ.

ಪ್ರಸ್ತುತ ಸ್ಥಿತಿ: ಸಂರಕ್ಷಣೆ ಮಾಡಲಾಗಿದೆ.

ವಿವರಣೆ: ವೀರನು ಉದ್ದವಾದ ಭರ್ಜಿಯನ್ನು ಹಿಡಿದು ಹೋರಾಟ ಮಾಡುತ್ತಿರುವ ಹಾಗೂ ಎಡಗೈಯಲ್ಲಿ ಬಂದೂಕು ಹಿಡಿದು ವೀರ ಮರಣವನ್ನಪ್ಪಿದ್ದಾನೆ. ಪಕ್ಕದಲ್ಲಿ ಅವನ ಪತ್ನಿಯು ನಮಸ್ಕಾರ ಸ್ಥಿತಿಯಲ್ಲಿ ಮಹಾಸತಿಯಾಗಿದ್ದಾಳೆ. ಜೊತೆಗೆ ಅವರಿಬ್ಬರಲ್ಲಿ ಕಿವಿಯೋಲೆ, ತೋಳುಬಂದಿ, ಕಾಲುಗಡುಗ, ಕೈಗಡಗ, ಕಂಠಹಾರ, ನಡುಪಟ್ಟಿ ಕಂಡು ಬರುತ್ತವೆ.[4]

**ಎರಡನೇ ಬಂದೂಕು ವೀರಮಾಸ್ತಿಗಲ್ಲು**

ಸ್ಥಳ: ತುಮಕೂರಿನ ವಿದ್ಯಾವಾಹಿನಿ ಪದವಿ ಪೂರ್ವ ಕಾಲೇಜು ಮುಂಭಾಗ

ಕಾಲ: 15–16ನೇ ಶತಮಾನ ಭೌತಿಕ ಸ್ಥಿತಿಗತಿ: ಕೆಂಪು ಮತ್ತು ಬಿಳಿ ಕಪ್ಪು ಮಿಶ್ರಿತ ಒರಟು ಶಿಲೆ, ಇದು 3ಅಡಿ ಎತ್ತರ, 2ಅಡಿ ಅಗಲ, 1/2 ಅಡಿ ದಪ್ಪವಿದೆ.

ಪ್ರಸ್ತುತ ಸ್ಥಿತಿ:ಸಂರಕ್ಷಣೆ ಮಾಡಲಾಗಿದೆ.

ವಿವರಣೆ: ವೀರನು ಉದ್ದವಾದ ಖಡ್ಗವನ್ನು ಹಿಡಿದು ಜೊತೆಗೆ ಬಂದೂಕುನ್ನು ಹಿಡಿದು ವೀರ ಹೋರಾಟವನ್ನು ಮಾಡಿ ವೀರ ಮರಣವನ್ನಪ್ಪಿದ್ದಾನೆ. ಪಕ್ಕದಲ್ಲಿ ಅವನ ಪತ್ನಿಯು ನಮಸ್ಕಾರ ಸ್ಥಿತಿಯಲ್ಲಿ ಮಹಾಸತಿಯಾಗಿದ್ದಾಳೆ. ಜೊತೆಗೆ ಅವರಿಬ್ಬರಲ್ಲಿ ಕಿವಿಯೋಲೆ, ತೋಳುಬಂದಿ, ಕಾಲುಗಡುಗ, ಕೈಗಡಗ, ಕಂಠಹಾರ, ನಡುಪಟ್ಟಿ ಕಂಡುಬರುತ್ತವೆ.

**ಮೂರನೇ ಬಂದೂಕು ವೀರಮಾಸ್ತಿಗಲ್ಲು**

ಸ್ಥಳ: ಕ್ಯಾತಸಂದ್ರ ಗುಡ್ಲಮ್ಮ ದೇವಸ್ಥಾನ ಮುಂಭಾಗ

ಕಾಲ: 15–16ನೇ ಶತಮಾನ

ಭೌತಿಕ ಸ್ಥಿತಿಗತಿ: ಕೆಂಪು ಮತ್ತು ಬಿಳಿ ಕಪ್ಪು ಮಿಶ್ರಿತ ಒರಟು ಶಿಲೆ, ಇದು 3 ಅಡಿ ಎತ್ತರ, 2 ಅಡಿ ಅಗಲ, 1/2 ಅಡಿ ದಪ್ಪವಿದೆ.

ಪ್ರಸ್ತುತ ಸ್ಥಿತಿ: ಸಂರಕ್ಷಣೆ ಮಾಡಲಾಗಿದೆ.

ವಿವರಣೆ: ವೀರನು ಉದ್ದವಾದ ಭರ್ಜಿಯನ್ನು ಎಡಗೈಯಲ್ಲಿ ಹಿಡಿದಿದ್ದಾನೆ. ಬಲಗೈಯಲ್ಲಿ ಬಂದೂಕು ಹಿಡಿದು ಹೋರಾಟ ಮಾಡಿ ವೀರಮರಣವನ್ನಪ್ಪಿದ್ದಾನೆ. ಪಕ್ಕದಲ್ಲಿ ಅವನ ಪತ್ನಿಯು ಕೈಯಲ್ಲಿ ಖಡ್ಗವನ್ನು ಹಿಡಿದು ನಿಂತಿದ್ದಾಳೆ. ಅವಳು ಮಹಾಸತಿಯಾಗಿದ್ದಾಳೆ. ಜೊತೆಗೆ ಅವರಿಬ್ಬರಲ್ಲಿ ಕಿವಿಯೋಲೆ, ತೋಳುಬಂದಿ, ಕಾಲುಗಡುಗ, ಕೈಗಡಗ, ಕಂಠಹಾರ, ನಡುಪಟ್ಟಿ ಕಂಡು ಬರುತ್ತವೆ.

**ಆತ್ಮ ಬಲಿದಾನ ಶಿಲ್ಪಗಳು**

ಇದು ಸ್ಮಾರಕ ಶಿಲ್ಪವಾಗಿದ್ದು, ಪ್ರಾಚೀನ ಕರ್ನಾಟಕದಲ್ಲಿ ವ್ಯಕ್ತಿಗಳು ಸಮಾಜದ ಕಲ್ಯಾಣಕ್ಕಾಗಿ ಮತ್ತು ಧಾರ್ಮಿಕ ಕಲ್ಯಾಣಕ್ಕಾಗಿ ಹಾಗೂ ರಾಜನ ಪ್ರಗತಿಗಾಗಿ ತಮ್ಮನ್ನು ತಾವು ಪ್ರಾಣ ಅರ್ಪಣೆ

ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಆತ್ಮ ಬಲಿದಾನ ಎಂದು ಕರೆಯಲಾಗುತ್ತದೆ[5].

**ಒಂದನೇ ಆತ್ಮ ಬಲಿದಾನ ಶಿಲ್ಪ**

**ಸ್ಥಳ:** ಉಮಾ ಪ್ರಗತಿ ಕಾಲೇಜು ಮುಂಭಾಗ

**ಕಾಲ:** 15–16 ನೇ ಶತಮಾನ

**ಭೌತಿಕ ಲಕ್ಷಣ:** ಕಪ್ಪು ಬಿಳಿ ಮಿಶ್ರಿತ ಒರಟು ಶಿಲೆ 3 ಅಡಿ ಎತ್ತರ, 2 ಅಡಿ ಅಗಲ 1 ಅಡಿ ದಪ್ಪ,

**ಪ್ರಸ್ತುತ ಸ್ಥಿತಿ:** ಸಂಕ್ಷಣೆಯಲ್ಲಿದೆ.

**ವಿವರಣೆ:** ಈ ಶಿಲ್ಪದಲ್ಲಿ ವೀರನು ನಮಸ್ಕಾರ ಸ್ಥಿತಿಯಲ್ಲಿ ಕುಳಿತುಕೊಂಡು ಧಾರ್ಮಿಕ ಕಲ್ಯಾಣಕ್ಕಾಗಿ ತನ್ನ ಪ್ರಾಣ ಅರ್ಪಣೆ ಮಾಡಿಕೊಂಡಿದ್ದಾನೆ

**ಎರಡನೇಯ ಆತ್ಮ ಬಲಿದಾನ ಶಿಲ್ಪ**

**ಸ್ಥಳ:** ತುಮಕೂರು ವಿಶ್ವವಿದ್ಯಾಲಯ ಬಯಲು ಉದ್ಯಾನ

**ಕಾಲ:** 16–17 ನೇ ಶತಮಾನ

**ಭೌತಿಕ ಲಕ್ಷಣ:** ಬಿಳಿ ಮತ್ತು ಕೆಂಪು ಮಿಶ್ರಿತ ಒರಟು ಶಿಲೆ 2 ಅಡಿ ಎತ್ತರ 1 ಅಡಿ ಆಗಲ 1 ಅಡಿ ದಪ್ಪ

**ವಿವರಣೆ:** ಇಲ್ಲಿ ವೀರನು ಸಮಾಜದ ಕಲ್ಯಾಣಕ್ಕಾಗಿ ತನ್ನ ಪ್ರಾಣವನ್ನು ಅರ್ಪಣೆ ಮಾಡಿದ್ದಾನೆ. ವೀರನು ತೋಳಬಂಧಿ, ಕಂಠಹಾರ, ಹಣೆಯ ಮೇಲೆ ವಿಭೂತಿಯನ್ನು ಧರಿಸಿದ್ದಾನೆ.

ಒಟ್ಟಾರೆ ತುಮಕೂರು ನಗರದ ಸ್ಮಾರಕ ಶಿಲ್ಪಗಳು 15–17ನೇ ಶತಮಾನಕ್ಕೆ ಸೇರಿವೆ ಎಂಬುದನ್ನು ಶಿಲ್ಪಗಳು ತಿಳಿಸುತ್ತವೆ[6]. ತುಮಕೂರು ನಗರ ಪ್ರದೇಶದಲ್ಲಿ ದೊರೆತಿರುವ ವೀರಮಾಸ್ತಿಗಲ್ಲುಗಳು ಸ್ಥಳಿಯ ಹೋರಾಟದ ಬಗ್ಗೆ ನಿಖರ ಮಾಹಿತಿಯನ್ನು ನೀಡುತ್ತವೆ. ಶಾಸನದ ಹೊರತಾಗಿ ವಿಜಯನಗರದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಹಾಗೂ ಇತಿಹಾಸ ಮರುರಚಿಸುವಲ್ಲಿ ಸ್ಮಾರಕ ಶಿಲ್ಪಗಳು ಇತಿಹಾಸದ ಪ್ರಾಥಮಿಕ ಆಕರವಾಗಿವೆ. ಇಂತಹ ಸ್ಮಾರಕಗಳನ್ನು ನಿಧಿಗಳ್ಳರು ನಾಶಪಡಿಸುತ್ತಿದ್ದು ಇವುಗಳ ಸಂರಕ್ಷಣೆ ಅಗತ್ಯವಾಗಿದೆ.

**ಕೊನೆಟಿಪ್ಪಣಿಗಳು**

1. ರೈಸ್ ಬಿ.ಎಲ್. (ಸಂ.) (1904). ಎಪಿಗ್ರಫಿಯಾ ಕರ್ನಾಟಿಕ. ಸಂಪುಟ–12. ಮೈಸೂರು ಗೌರ್ಮೆಂಟ್ ಪ್ರೆಸ್.
2. ಶ್ರೀ ನೀಲಕಂಠಶಾಸ್ತ್ರಿ. (ಸಂ.) (1956). ಎಪಿಗ್ರಫಿಯಾ ಕರ್ನಾಟಿಕ. ಸಂಪುಟ–16. ಮೈಸೂರು ಗೌರ್ಮೆಂಟ್ ಪ್ರೆಸ್.
3. ಶೇಷಾಶಾಸ್ತ್ರಿ ಆರ್. (2004). ಕರ್ನಾಟಕ ವೀರಗಲ್ಲುಗಳು. ಕನ್ನಡ ಸಾಹಿತ್ಯ ಪರಿಷತ್
4. ಪರಮಶಿವಮೂರ್ತಿ ಡಿ.ವಿ. (2010). ಕನ್ನಡ ಶಾಸನ ಶಿಲ್ಪಗಳು. ಕನ್ನಡ ವಿಶ್ವವಿದ್ಯಾಲಯ.
5. ಅದೇ.
6. ಕ್ಷೇತ್ರ ಕಾರ್ಯ

**ಪರಾಮರ್ಶನ ಗ್ರಂಥಗಳು**


- ಗೀತಾ ಪಾಟೀಲ್. (2018). *ಕರ್ನಾಟಕದ ವೀರಗಲ್ಲುಗಳು.* ಬರಹ ಪಬ್ಲಿಷಿಂಗ್ ಹೌಸ್.
- ಪರಮಶಿವಮೂರ್ತಿ ಡಿ.ವಿ. (2010). *ಕನ್ನಡ ಶಾಸನ ಶಿಲ್ಪಗಳು.* ಕನ್ನಡ ವಿಶ್ವವಿದ್ಯಾಲಯ.
- ಶೇಷಾಶಾಸ್ತ್ರಿ ಆರ್. (2004). *ಕರ್ನಾಟಕ ವೀರಗಲ್ಲುಗಳು.* ಕನ್ನಡ ಸಾಹಿತ್ಯ ಪರಿಷತ್